
# ಜಿ.ಎಸ್. ಶೆಣೈ



ಕರಾವಳಿಯ ಊರು ಉಡುಪಿಯವರಾದ ಜಿ.ಎಸ್. ಶೆಣೈ (1938– 1994) ಕರ್ನಾಟಕ ಕಂಡ ಅಪೂರ್ವ ಕಲಾವಿದ. ಭೂಮಿಯ ಮೇಲಿನ ಅಗಣಿತ ರಾಗ ರಂಗುಗಳನ್ನು ತಮ್ಮ ಕಲಾಕೃತಿಗಳಲ್ಲಿ ಮೂಡಿಸಿದ ಈ ಕಲಾವಿದ ತಮ್ಮ ಮಧ್ಯವಯಸ್ಸಿನಲ್ಲೇ ಕುಂಚವನ್ನು ಕೆಳಗಿಟ್ಟು ನಿರ್ಗಮಿಸಿದರು.

ಬಾಲ್ಯದಲ್ಲೇ ವರ್ಣದ ಅವರ್ಣನೀಯ ಮಾಯೆಯತ್ತ ಸೆಳೆಯಲ್ಪಟ್ಟ ಶೆಣೈ ಮೊದಲಿಗೆ ಕಲೆಯ ವಿದ್ಯಾಭ್ಯಾಸ ಮಾಡಿದ್ದು ಮೈಸೂರಿನ ಕಾವಾದಲ್ಲಿ. ಅಲ್ಲಿದ್ದ ಅವರ ಕಲಾಗುರುಗಳಾದ ಸೂಫಿ ಮಾಸ್ತರರು 'ನೀನು ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಹೆಚ್ಚಿನ ಅಭ್ಯಾಸ ಮಾಡು' ಎಂದು ಹೇಳಿದ ಮೇಲೆ ಮುಂಬೈಗೆ ತೆರಳಿದರು. ಅಲ್ಲಿ ದಂಡಾವತಿಮಠ ಅವರ ಕಲಾಶಾಲೆ ಇತ್ತು. ಅವರ ಸಹಯೋಗದಲ್ಲಿ ಶೆಣೈ ಕಲಿತದ್ದು ಅಪಾರ. ಮುಂಬೈನಿಂದ ಮರಳಿದ ಅವರು ತಮ್ಮ ಹುಟ್ಟೂರು ಉಡುಪಿಯಲ್ಲಿ ಎರಡು ಕಲಾ ವೇದಿಕೆಗಳನ್ನು ಹುಟ್ಟುಹಾಕಿದರು. ಒಂದು, 'ಸೌತ್ ಕೆನರಾ ಆರ್ಟ್ ಕೌನ್ಸಿಲ್ (ಎಸ್‌ಕೆಎಸಿ), ಇನ್ನೊಂದು 'ಶೃಂಗಾರ ಆರ್ಟ್ ಗ್ಯಾಲರಿ'. ದಕ್ಷಿಣ ಕನ್ನಡದಲ್ಲಿ ಇದು ಮೊದಲ ಆರ್ಟ್ ಗ್ಯಾಲರಿ. ಅವರು 'ಕಲಾ ಭಾರತಿ ಆರ್ಟ್ ಸ್ಕೂಲ್' ಎಂಬ ಕಲಾ ಶಾಲೆಯೊಂದನ್ನೂ ಕೂಡ ಆರಂಭಿಸಿದರು. 'ಜಲವರ್ಣ', 'ಮಿಶ್ರಮಾಧ್ಯಮ', 'ಮ್ಯೂರಲ್', 'ತೈಲಚಿತ್ರ', 'ಶಿಲ್ಪ', 'ಲೋಹ ಮಿಶ್ರ ಮಾಧ್ಯಮ', 'ಲ್ಯಾಂಡ್‌ಸ್ಕೇಪ್', 'ಬಟ್ಟೆಯ ಮೇಲೆ ಚಿತ್ರ ರಚಿಸುವುದು' ಹೀಗೆ ಕಲೆಯ ಎಲ್ಲ ಮಾಧ್ಯಮಗಳಲ್ಲಿ ಶೆಣೈ ತಮ್ಮ ಛಾಪನ್ನು ಮೂಡಿಸಿದ ವಿರಳ ಕಲಾವಿದ. ಅದರಲ್ಲೂ ಅವರನ್ನು ಜಲವರ್ಣದ 'ಮಾಸ್ಟರ್' ಎಂದೇ ಗುರುತಿಸಲಾಗುತ್ತದೆ. ನಿಸರ್ಗದ ಬಣ್ಣಗಳು ವಿನ್ಯಾಸಗಳ ಮೂರ್ತ ರೂಪಗಳನ್ನು ಅಮೂರ್ತದ ನೆಲೆಯಲ್ಲಿ ಚಿತ್ರಿಸುವ ಅವರದು ಅನನ್ಯವಾದ ಶೈಲಿ. 'ಮಯೂರ'ದ ಮುಖಪುಟದಲ್ಲಿರುವ ಚಿತ್ರ ಅದಕ್ಕೊಂದು ಉದಾಹರಣೆಯಷ್ಟೆ.



ಹಂಪಿಯ ಶಿಲ್ಪಕಲೆ, ಅಲ್ಲಿನ ಮೋಹಕ ಬಂಡೆಗಳನ್ನು ಜಲವರ್ಣದಲ್ಲಿ ಶೆಣೈ ಅವರು ಚಿತ್ರಿಸಿದ ರೀತಿ ಇಂದಿಗೂ ಕಲಾವಿದ್ಯಾರ್ಥಿಗಳಿಗೆ ಪಾಠದಂತಿದೆ. ಹಂಪಿಯ ಮೇಲೆ ಅವರು 300ಕ್ಕೂ ಹೆಚ್ಚು ಚಿತ್ರಗಳನ್ನು ರಚಿಸಿದ್ದಾರೆ. ಇವೂ ಸೇರಿದಂತೆ ಅವರ ಪ್ರಖ್ಯಾತ ಚಿತ್ರಗಳಾದ 'ಆ್ಯಡಂ ಅಂಡ್ ಈವ್', 'ಪ್ರೈಡ್ ಆಫ್ ದ ಪರ್ಪಲ್ ಫ್ರಾಕ್', 'ವಾಟರ್ ಫಾಲ್ಸ್', ಜಲವರ್ಣದ 'ವೈಲ್ಡ್ ರಾಕ್ ಸರಣಿ' ಹಾಗೂ ಅವರು ಕೆಲಸ ಮಾಡಿದ ಎಲ್ಲ ಮಾಧ್ಯಮಗಳ ಪ್ರಾತಿನಿಧಿಕ ಚಿತ್ರಗಳ ಪುಸ್ತಕ 'ಫುಟ್ ಪ್ರಿಂಟ್ಸ್ ಶೆಣೈ' ಸಿದ್ಧವಾಗಿದ್ದು, ಶೀಘ್ರದಲ್ಲಿ ಕಲಾಭಿಮಾನಿಗಳ ಕೈಸೇರಲಿದೆ. ಅವರ ಮಗ, ಖ್ಯಾತ ಕಲಾವಿದ ಗುರುದಾಸ್ ಶೆಣೈ ಅವರ ಶ್ರಮದಿಂದ ಮತ್ತು ಜಿ.ಎಸ್. ಶೆಣೈ ಅವರ ಮಿತ್ರ, ಪ್ರಖ್ಯಾತ ಕಲಾವಿದ ಎಂ.ಎಫ್. ಹುಸೇನ್ ಅವರ ಪ್ರೇರಣೆಯಿಂದ 'ಕಾಫಿ ಟೇಬಲ್ ಬುಕ್' ಆಕಾರದ, ಸುಮಾರು 300 ಪುಟಗಳ ವರ್ಣರಂಜಿತ ಪುಸ್ತಕ ರೂಪುಗೊಂಡಿದೆ. ಇದು ಶೆಣೈ ಅವರ ಕಲೆಗೆ ಸಲ್ಲಿಸುವ ವರ್ಣ ಶ್ರದ್ಧಾಂಜಲಿ ಮತ್ತು ಅವರ ಕಲೆಯನ್ನು ಅರಿತುಕೊಳ್ಳಲು ಮಾರ್ಗದರ್ಶಿ ಆಗಲಿದೆ.